<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆ:**1902/2025**</u>

| | | |
|---|---|---|
| <u>ಪಿರ್ಯಾದಿ</u> | : | ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,<br>ಕಳಸ ತಾಲ್ಲೂಕು. |

ವಿರುದ್ಧ

| | | |
|---|---|---|
| <u>ಆರೋಪಿ</u> | : | ಪ್ರಭಾಕರ್.ಕೆ.ಎ,<br>ವಯಸ್ಸು ಸುಮಾರು 44 ವರ್ಷ,<br>ಬಿನ್ ದಿಃ ಅಶ್ವಥಗೌಡ,<br>ವಾಸಃ ಕಳಗೋಡು ಗ್ರಾಮ,<br>ಕಳಸ ಹೋಬಳಿ ಮತ್ತು ತಾಲ್ಲೂಕು. |

<u>ದೋಷಾರೋಪಣೆ</u>

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 30.01.2025 ರಂದು ರಾತ್ರಿ 10.30 ರ ಸಮಯದಲ್ಲಿ ಕಳಸ ಪೊಲೀಸ್ ಠಾಣಾ ವ್ಯಾಪ್ತಿಯ ಕಳಕೋಡು ಗ್ರಾಮದಲ್ಲಿ ಆರೋಪಿಯಾದ ನೀವು ನಿಮ್ಮ ಮಾಲೀಕತ್ವದ ಕಳಕೋಡು ಗ್ರಾಮದ ಸರ್ವೆ ನಂ.50 ರಲ್ಲಿನ ನಿಮ್ಮ ಕಾಫೀ ತೋಟದಲ್ಲಿ ಚಾಸಾ1-ಜ್ಞಾನಪ್ರಕಾಶ್ ಹಾಗೂ ಚಾಸಾ10-ಅಲಗೇಸನ್ ರವರೊಂದಿಗೆ ನಡೆದುಕೊಂಡು ಹೋಗುವಾಗ ನಿಮ್ಮ ಕೈಯಲ್ಲಿದ್ದ ನಿಮ್ಮ ಬಾಬ್ತು ಪರವಾನಿಗೆ ಹೊಂದಿರುವ ಲೋಡ್ ಮಾಡಿದ ಎಸ್.ಬಿ.ಎಂ.ಎಲ್ ಬಂದೂಕನ್ನು ನಿಮ್ಮ ಜೊತೆಗಿದ್ದ ಯಾವುದೇ ತರಹದ ಬಂದೂಕು ಪರವಾನಗಿ/ತರಭೇತಿ ಹೊಂದದೇ ಇರುವ ಚಾಸಾ1 ರವರೇ ಕೊಡು ಎಂದು ಒತ್ತಾಯದಿಂದ ಕೇಳಿದ್ದರಿಂದ ನೀವು ಚಾಸಾ1 ರವರ ಕೈಗೆ ಬಂದೂಕನ್ನು ಕೊಟ್ಟಿದ್ದ ಸಮಯದಲ್ಲಿ ಚಾಸಾ1 ರವರ ಕತ್ತಲೆಯಲ್ಲಿ ಕಾಲುಜಾರಿ ಪಕ್ಕದ ಗುಂಡಿಗೆ ಬಿದ್ದಿದ್ದರಿಂದ ಆ ಬಂದೂಕು ಆಕಸ್ಮಿಕವಾಗಿ ಕಲ್ಲಿಗೆ ತಾಗಿ ಬ್ಲಾಸ್ಟ್ ಆಗಿ ಚಾಸಾ1 ರವರ ಎಡ ಕೈಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **125(ಬಿ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸದರಿ ಬಂದೂಕನ್ನು ಬಂದುಾಕು ಬಳಸುವ ಯಾವುದೇ ತರಹದ ತರಬೇತಿ ಹೊಂದಿರದ ಚಾಸಾ1 ರವರ ಕೈಗೆ ಕೊಟ್ಟು ಬಂದೂಕು ಪರವಾನಿಗೆಯ ನಿಬಂಧನೆಗಳನ್ನು/ಷರತ್ತುಗಳನ್ನು ಉಲ್ಲಂಘನೆ ಮಾಡಿರುತ್ತೀರಿ. ಈ

ರೀತ್ಯಾ ಆರೋಪಿಯಾದ ನೀವು ಭಾರತೀಯ ಆಯುಧ ಕಾಯ್ದೆ ಕಲಂ **30** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ದಿನಾಂಕ 03.10.2025 ರಂದು ಆರೋಪಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd/-**

ಮೂಡಿಗೆರೆ
ದಿನಾಂಕಃ 03.10.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.